International Journal of Kannada Research
www.kannadajournal.com

**ISSN: 2454–5813**
IJKR 2020; 6(1): 107-110
© 2020 IJKR
www.kannadajournal.com
Received: 28-11-2019
Accepted: 30-12-2019

**ಲೋಹಿತ್.ಪಿ**
ಕನ್ನಡ ಸಹಾಯಕ ಪ್ರಧ್ಯಾಪಕರು
ಅಕ್ಷರ ಇನ್ಸ್ಟಿಟ್ಯೂಟ್ ಆಫ್
ಮ್ಯಾನೇಜ್‌ಮೆಂಟ್ ಸ್ಟಡೀಸ್
ಚೆನ್ನಮುಂಬಾಪುರ,
ಜೆ.ಎನ್.ಎನ್.ಕಾಲೇಜ್ ಎದುರು,
ಸವಳಂಗ ರಸ್ತೆ, ಅಕ್ಷರ ನಗರ
ಶಿವಮೊಗ್ಗ

**Corresponding Author:**
**ಲೋಹಿತ್.ಪಿ**
ಸಂಶೋಧನಾ ವಿದ್ಯಾರ್ಥಿ
ಡಾ. ಹಾಮಾನಾ ಸಂಶೋಧನ
ಕೇಂದ್ರ ಎಸ್.ಡಿ.ಎಂ
ಕಾಲೇಜು(ಸ್ವಾಯತ್ತ), ಉಜಿರೆ
ದಕ್ಷಿಣ ಕನ್ನಡ ಜಿಲ್ಲೆ, ಕರ್ನಾಟಕ –
೫೭೪೨೪೦ ಮೊಬೈಲ್
ಮೊಬೈಲ್

# ಪ್ರಾಚೀನ ಪಠ್ಯಗಳ ಮರುಓದು

**ಲೋಹಿತ್.ಪಿ**

ಕಾವ್ಯದ ಮೂಲ ಉದ್ದೇಶ ಜನರ ಮನಸ್ಸನ್ನು ತಿದ್ದುವುದು ಮತ್ತು ಸಂತೋಷವನ್ನು ನೀಡುವುದು ಅದರ ಪ್ರಮುಖ ಲಕ್ಷಣವಾಗಿದೆ. ಇರುವ ನೈತಿಕ ಮೌಲ್ಯಗಳು ಕವಿಗಳ ವಿಚಾರಗಳು ಕಾವ್ಯ ಚರ್ಚೆ ಎಲ್ಲ ಕಾಲಕ್ಕೂ ಈ ವಿಚಾರ ಅವಶ್ಯಕತೆ ಇದ್ದೆ ಇದೆ. ರಾಮಾಯಣ ಮಹಾಭಾರತ ಭಾಗವತಪೂರಾನದಂತಹ ಮಹಾಕಾವ್ಯಗಳ ಓದು ಹೀಗೆ ಜನಾಂಗದವರಿಗೂ ಇಂದಿನ ಜನರಿಗೂ ಬಹು ಮುಖ್ಯವಾದ ರಸಗ್ರಹಣ ಹಾಗೂ ಅವುಗಳಲ್ಲಿ ಅಡಗಿರುವ ತಾತ್ವಿಕ ಮೌಲ್ಯಗಳ ಅಳವಡಿಕೆ ಹಾಗೂ ಆ ಕಾವ್ಯಗಳ ಅಧ್ಯಯನ ಬಹು ಮುಖ್ಯವಾದ ವಿಚಾರವಾಗಿದೆ. ಪ್ರಸ್ತುತ ದಿನಗಳಲ್ಲಿ ತಂದೆತಾಯಿಯರ ಸೇವೆ ಅಣ್ಣ ತಮ್ಮಂದಿರಲಿ ಕಂಡುಬರುವ ಪ್ರೀತಿ, ಆತ್ಮೀಯ ಗೆಳೆತನ, ಮಕ್ಕಳಿಗೆ ಒಳ್ಳೆಯ ಸಂಸ್ಕಾರ ದೊರೆಯಬೇಕೆಂದರೆ ನಾವು ಹಳಗನ್ನಡ ಕಾವ್ಯಗಳಾದ ಆದಿಪುರಾಣ, ವಿಕ್ರಮಾರ್ಜುನ ವಿಜಯ, ಕವಿರಾಜಮಾರ್ಗ, ನಯಸೇನನ ಧರ್ಮಾಮೃತ, ದಯವೇ ಧರ್ಮವೆಂದು ಪ್ರತಿಪಾದಿಸುವ ವಡ್ಡಾರಾಧನೆ, ಶರಣರ ವಚನಗಳು ಹೀಗೆ ಮುಂತಾದ ಕಾವ್ಯಗಳ ಅಧ್ಯನದ ವಿವರವಾಗಿ ವಿಮರ್ಶೆ ಮಾಡಬೇಕಾಗಿದೆ.
ಚಾರಿತ್ರಿಕ ಅಂಶದ ಹಿನ್ನೆಲೆಯಲ್ಲಿ ಕನ್ನಡ ನಾಡಿನ ಜನ ಹೇಗಿದ್ದರು ಎಂಬುದನ್ನು ಕವಿರಾಜಮಾರ್ಗಕಾರ ಒಂದು ಸುಂದರವಾದ ಕಂದ ಪದ್ಯದಲ್ಲಿ ಹೇಳಿದ್ದಾನೆ.

ಸುಭಟರ್ಕಳ್ ಕವಿಗಳ್
ಪ್ರಭುಗಳ್ ಚೆಲ್ವರ್ಕಳ್ ಅಭಿಜನರ್ಕಳ್ ಗುಣಿಗ
ಳಭಿಮಾನಿಗಳ್ ಅತ್ಯುಗ್ರರ್
ಗಂಭೀರ್ ಚಿತ್ತರ್ ವಿವೇಕಿಗಳ್ ಆ ನಾಡವರ್ಗಳ್.

ಎಂದು ಕವಿರಾಜಮಾರ್ಗಕಾರನು ಕನ್ನಡಿಗರ ಗುಣಲಕ್ಷಣಗಳನ್ನು ಕುರಿತು ಪಟ್ಟಿ ಮಾಡಿದ್ದಾನೆ. ಆದರೆ ಪ್ರಸ್ತುತ ದಿನಗಳಲ್ಲಿ ನಮ್ಮ ನಾಡಿನಲ್ಲಿ ಬೆಳೆಯುವ ಮಕ್ಕಳಲ್ಲಿ ವೀರತೆಯಾಗಲಿ, ಕವಿಗಳಾಗಲಿ, ಒಲ್ಲೆಯ ನಡತೆಯುಳ್ಳ ಪ್ರಭುಗಳಾಗಲಿ, ತಮ್ಮದೇ ಆದ ಸ್ವಂತ ಅಭಿಮಾನವನ್ನಾಗಲಿ, ವಿವೇಕಿಗಳಾದಂತಹ ನಾಡಿನ ವರ್ಗ ಅಥವಾ ಜನಸಮುದಾಯ ಆ ದಿಶೆಯಲ್ಲಿ ಬೆಳೆಯುವುದು ಎನ್ನಬಹುದು. ಕಾರಣ ಆಗಿನ ಕಾಲದ ಗತವೈಭವ ಮರಳಿ ಬಂದರೆ ನಮ್ಮ ಭಾರತ ದೇಶ ಅತ್ಯಂತ ಶ್ರೀಮಂತ ಪರಂಪರೆಯ ಪಟ್ಟಿಯಲ್ಲಿ ಸೇರುತ್ತದೆ. ಪ್ರಾಚೀನ ಕಾಲದ ಜನರ ನಡೆ ನುಡಿ ಹಾಗೂ ಕಾವ್ಯದ ಮೌಲ್ಯಗಳು ಹಾಗೆ ಇದ್ದವು ಎನ್ನಬಹುದು ಆದ್ದರಿಂದ ಈ ದಿಸೆಯಲ್ಲಿ ಕನ್ನಡ ಪ್ರಾಚೀನ ಪಠ್ಯಗಳ ಮರುಓದು ತುಂಬಾ ತುಂಬಾ ಅಗತ್ಯವಾಗಿದೆ.
ಕನ್ನಡ ಕರ್ನಾಟಕ ಶಬ್ದಗಳ ಪ್ರಾಚೀನತೆ ಪ್ರಯೋಗ :
ಕನ್ನಡ ಕರ್ಣಾ(ರ್ನಾ)ಟಕ ಎಂಬ ಶಬ್ದಗಳು ಬಹು ಪ್ರಾಚೀನ ಕಾಲದಲ್ಲಿಯೇ ಈ ನಮ್ಮ ನಾಡಿನ ಭಾಗಕ್ಕೆ ಬಳಕೆಯಾಗುತ್ತ ಬಂದಿರುವುದನ್ನು ಶಾಸನಗಳ ಹಾಗು ಸಾಹಿತ್ಯ ಗ್ರಂಥಗಳ ಆಧಾರದಿಂದ ತಿಳಿದು ಕೊಳ್ಳಬಹುದಾಗಿದೆ. ಕನ್ನದ ಎಂಬುದು ದೇಶ ಹಾಗೂ ಭಾಷಾವಾಚಕವಾಗಿ ಕವಿರಾಜಮಾರ್ಗ ದಲ್ಲಿಯೇ(ಸು, ೮೫೦) ಈವರೆ ದೊರೆತ ಗ್ರಂಥಗಳಲ್ಲಿಯೇ ಮೊದಲನೆಯ ಪ್ರಯೋಗವಾಗಿರುವುದನ್ನು ಗಮನಿಸಬಹುದು.

ಕಾವೇರಿಯಿಂದಮಾ ಗೋ
ದಾವರಿವರಮಿರ್ದ ನಾಡದಾ ಕನ್ನಡದೋಳ್
ಭಾವಿಸಿದ ಜನಪದಂ ವಸು
ಧಾವಳಯ ವಿಲೀನ ವಿಶದ ವಿಷಯ ವಿಶೇಷಂ (೧–೩೬)

ಇದರ ಸಾಮಾನ್ಯರ್ಥ ಎಂದರೆ ಈ ಕನ್ನಡ ನಾಡು ಕಾವೇರಿಯಿಂದ ಗೋದಾವರಿ ನದಿಯವರೆಗೂ ವಿಸ್ತಾರವನ್ನು ಹೊಂದಿತು. ಈ ನಾಡು ಪ್ರಸಿದ್ಧವಾದ ಜನಪದವೆನಿಸಿದೆ. ಭೂಮಂಡಲದೊಳಗೆ ಸೇರಿರುವ ನಿರ್ಮಲ ರಾಜ್ಯವೆನಿಸಿದೆ. ಆ ಕನ್ನಡ ತಿರುಳನ್ನು ಮುಂದೆ ಹೀಗೆ ವಿವರಿಸಿದ್ದಾನೆ.

ಅದರೊಳಗಂ ಕಿಸುವೊಳಲಾ
ವಿದಿತ ಮಹಾಕೊಪಣನಗರದಾ ಪುಲಿಗೆರಿಯಾ
ಸದಭಿಸ್ತು ತಮಪ್ಪೊಂಕುಂ
ದದ ನಡುವಣ ನಾಡೆ ಕನ್ನದದ ತಿರುಳು (೧–೨೭)

ಕಿಸುವೊಳಲು (ಬಿಜಾಪುರ ಜಿಲ್ಲೆಯ ಪಟ್ಟದಕಲ್ಲು) ಕೊಪಣನಗರ (ರಾಯಚೂರು ಜಿಲ್ಲೆಯ ಕೊಪ್ಪಳ) ಪುಲಿಗೇರಿ (ಧಾರವಾಡ ಜಿಲ್ಲೆಯ ಲಕ್ಷ್ಮೇಶ್ವರ) ಒಂಕುಂದ (ಬೆಳಗಾಂ ಜಿಲ್ಲೆಯ ಈಗಿನ ಒಕ್ಕುಂದ) ಇವುಗಳ ನಡುವಿನ ನಾದ ಆ ಕನ್ನಡ ತಿರುಳಾದ ಪ್ರದೇಶ ಈ ಮೇಲಿನ ಎರಡು ಪದ್ಯಗಳಲ್ಲಿ ಕನ್ನಡ ಶಬ್ದ ದೇಶವಾಚಕವಾಗಿಯೇ ಇರುವುದು ಗಮನಿಸಬಹುದು.

ಗೋವಿನ ಕಥೆ :
ಆನಪದ ಕಥನ ಕಾವ್ಯವೆಂದರೆ 'ಗೋವಿನ ಕಥೆ' ಈ ದೀರ್ಘ ಕವಿತೆಯ ಕಾಲ ನಮಗೆ ಗೊತ್ತಿಲ್ಲ. ಈ ಕವಿತೆ ಪಠ್ಯ ಪುಸ್ತಕಗಳಲ್ಲಿ ಸೇರಿದ ಮೇಲೆ ಒಂದು ನೀತಿ ವಾಕ್ಯಕ್ಕೆ ಸೀಮಿತವಾಯಿತು. 'ಸತ್ಯವೇ ಪರಮಾತ್ಮವೆಂದು ಪುಣ್ಯಕೋಟಿಯ ಕಥೆಯಿದು'
ಪುಣ್ಯ ಕೋಟಿಯು ಎಂಬ ಆಕಳು ಒಂದು ಸಂದರ್ಭದಲ್ಲಿ ಹೇಳುವ ಮಾತೆಂದರೆ 'ಸತ್ಯ ವಾಕ್ಯಕೆ ತಪ್ಪಿ ನಡೆದರೆ ಮೆಚ್ಚನಾ ಪರಮಾತ್ಮನು' ಸುದೈವದಿಂದ ಈ ಪಠ್ಯ ಜಾನಪದವಾಗಿರುವುದರಿಂದ ಕವಿತೆಯಲ್ಲಿಯ ಮಹತ್ವದ ಕ್ಷಣವೆಂದಎ ಪುಣ್ಯಕೋಟಿ ತನ್ನ ಕರುವಿನ ಹಸಿವನ್ನು ತಣಿಸಿದ ಮೇಲೆ ಅರ್ಬುದ ಎಂಬ ಹುಲಿಯ ಹಸಿವನ್ನು ತಣಿಸಲು ವಚನವೀಯುತ್ತದೆ.

ಖಂಡವಿದೆ ಕೋ ಮಾಂಸವಿದೆ ಕೋ
ಗುಂಡಿಗೆಯ ಬಿಸಿರಕ್ತವಿದೆ ಕೋ
ಚಂಡವ್ಯಾಘ್ರವೆ ನೀನಿದೆಲ್ಲವ
ನುಂಡು ಸಂತಸದಿಂದಿರು

ಪುಣ್ಯಕೋಟಿಯ ಮಾತಿನಲ್ಲಿ ಖಂಡ ಮಾಂಸ ರಕ್ತಗಳೂ ಬಂದರು ಅಕ್ರೋಶವಿಲ್ಲ ಉಂಡು ಸಂತಸದಿಂದಿರು ಎಂದು ಹೇಳುವ ಪ್ರೀತಿಯಿದೆ. ಕೊನೆಗಳಿಗೆಯಲ್ಲಿ ಹುಲಿಯ ಎದುರು ಬಂದು ನಿಲ್ಲುವ ಮೊದಲು ತನ್ನ ಕರುವಿಗೆ ಹುಲಿಯ ಬಗ್ಗೆ ಎಚ್ಚರದ ಮಾತುಗಳನ್ನು ಹೇಳಲು ಮರೆಯುವುದಿಲ್ಲ.

ಬೆಟ್ಟದೊತ್ತಿಗೆ ಹೋಗಬೇಡ
ಕಟ್ಟಕಡೆಯಲ್ಲಿ ಮೇಯಬೇಡ
ದುಷ್ಟವ್ಯಾಘ್ರನು ಹೊಂಚುತ್ತಿರುವನು
ನಟ್ಟ ನಡುವಿರು ಕಂದನೆ

ಈ ಉಪದೇಶದಲ್ಲಿ ಅನಿಶ್ಚಿತತೆಯೇ ಅದರ ಶಕ್ತಿಯಾಗಿದೆ. ಸಾವು ಸುತ್ತುಗಟ್ಟಿ ನಿಂತಿರುವಾಗ ಬದುಕಿ ಉಳಿಯುವುದು ಒಂದು ಮೌಲ್ಯವೆಂದರೆ ಜೀವನವನ್ನು ಪ್ರೀತಿಸುವುದೇ ಆಗಿದೆ.

**ಕುಲಯ ಬಗ್ಗೆ ಪಂಪನ ಅಭಿಪ್ರಾಯ**
ಪಂಪನು ತಾನು ಪ್ರತಿಪಾದಿಸುವ ಮತ್ತೊಂದು ಘನ ಮೌಲ್ಯವೆಂದರೆ ಕುಲದ ವಿಚಾರ ತನ್ನ ಭಾಅತದ ೧೦ನೇ ಆಶ್ವಾಸದಲ್ಲಿ ಮುಂದಿನ ದಿನದ ಕುರುಕ್ಷೇತ್ರ ಯುದ್ಧದ ಸಾರಥಿಯ ವಿಚಾರವಾಗಿ ಸಿದ್ಧತೆಯಲ್ಲಿರುವಾಗ ಆಗ ಭೀಷ್ಮ ಮತ್ತು ಕರ್ಣರ ನಡುವೆ ಮಾತಿನ ಚಕಮಕಿ ನಡೆಯುತ್ತದೆ.
ಕುಲಮನೆ ಮುನ್ನಮುಗ್ಗಡಿಪಿರೇಂಗಳ್ ನಿಮ್ಮ ಕುಲಂಗಳಾಂತು ಮಾ
ರ್ಮಲೆವನಟ್ಟ ತಿಂಬವೆ ಕುಲಂ ಕುಲಮಲ್ತು ಚಲಂ ಕುಲಂ ಗುಣಂ
ಕುಲಮಭಿಮಾನವೊಂದೆ ಕುಲಾಣ್ಮು ಕುಲಂ ಬಗೆವಾಗಳೀಗಳೀ
ಕಲಹದೊಳಣ್ಣ ನಿಮ್ಮ ಕುಲವಾಕುಲಮಂ ನಿಮಗುಂಟು ಮಾದುಗಂ
(ಪಂಪಭಾರತಂ ಅನಂತರಂಗಾಚಾರ್ಯ ಕಸಾಪ ಪುಟ ೪೫೩)
ಕೆನಡಾ, ಅಮೇರಿಕಾ, ಸ್ವಜರಲ್ಯಾಂಡ್, ರಷ್ಯಾ ಮುಂತಾದ ಪಾಶ್ಚಾತ್ಯ ರಾಷ್ಟ್ರಗಳಲ್ಲಿ ಜಾತಿ ವಿಚಾರ ಅಷ್ಟೊಂದು ಪ್ರಮುಖವಾದ ವಿಷಯವಲ್ಲ.
ಭಾರತ ದೇಶಕ್ಕೆ ಬಂದರೆ ಅದು ಗ್ರಾಮೀಣ ಪ್ರದೇಶಗಳಲ್ಲಿ ಸಮಗಾರ, ಮಾದರ ಕುಂಬಾರ, ಬಣಜಿಗ, ಅಯ್ಯಂಗಾರಿ, ಪಟೇಲ, ಪಾಟೀಲ, ಗೌಡ್ರು, ಲಿಂಗಾಯತ ಗಾಣಿಗ, ಅಕ್ಕಸಲಿಗ, ಜಾಡ ಹಟಗಾರ, ಮರಾಠಾ ಮುಂತಾದ ಜಾತಿ ಸಮುದಾಯಗಳು ಕಂಡುಬರುತ್ತವೆ. ಅದರೊಂದಿಗೆ ಅವರವರ ಆಚಾರ ವಿಚಾರ ಹಾಗೂ ಸಂಪ್ರದಾಯಗಳು ಕೂಡಾ ಬಹಳ ಪ್ರಮುಖವಾಗಿ ಆಚರಿಸುತ್ತಾ ಬಂದಿರುತ್ತಾರೆ. ಮನೆ ದೇವರ ಪೂಜೆ ಪುನಸ್ಕಾರಗಳೂ, ವಿವಾಹಪದ್ಧತಿ, ತಮ್ಮ ತಮ್ಮ ಜಾತಿಯ ಜನರೊಂದಿಗೆ ಮಾತ್ರ ಬೆರೆಯುವ ವಿಚಾರ ಹೀಗೆ ಸಮಾಜಿಕವಾಗಿ, ರಾಜಕೀಯವಾಗಿ, ಆರ್ಥಿಕವಾಗಿ ತಮ್ಮ ಜಾತಿಯ ಪ್ರಾಬಲ್ಯವನ್ನೆ ಮೆರೆಯಬೇಕೆಂದು ಹಂಬಲಿಸುತ್ತಾರೆ.
ಹತ್ತನೆ ಶತಮಾನದಲ್ಲಿಯೆ ಪಂಪನು ಆದಿಪುರಾಣದಲ್ಲಿಯೇ 'ಮಾನವ ಜಾತಿ ತಾನೊಂದೆ ವಲಂ' ಮಾನವ ಜಾತಿ ಎಲ್ಲರು ಒಂದೆ ಎಂದು ಸಾರಿದ್ದಾನೆ. ಅಲ್ಲದೆ ವಿಕ್ರಮಾರ್ಜುನ ವಿಜಯ ಕಾವ್ಯದಲ್ಲಿ ಮಾತಿಗೆ ಮೊದಲು ಕುಲವನ್ನೇ ಕುರಿತು ಏಕೆ ಹೀಯಾಳಿಸುವಿರೀ? ನಿಮ್ಮ ಕುಲಗಳು ನಿಮ್ಮನ್ನು ಎದುರಿಸಿ ನಿಂತವರನ್ನು ಹಿಂಬಾಲಿಸಿ ಅವರನ್ನು ತಿಂದು ಹಾಕುತ್ತವೆಯೇ? ಹುಟ್ಟಿನಿಂದ ಬಂದ ಜಾತಿ ನಿಜವಾದ ಜಾತಿಯಲ್ಲ. ನಿಜವಾದ ಜಾತಿಯೆಂದರೆ ನಿಮ್ಮ ಛಲವೇ ನಿಮ್ಮ ನಿಜವಾದ ಜಾತಿ. ನಿಮ್ಮ ಸದ್ಗುಣವೆ ನಿಮ್ಮ ನಿಜವಾದ ಜಾತಿ. ನಿಜವಾಗಿಯು ನಿಮ್ಮ ಆತ್ಮಗೌರವವೇ ನಿಮ್ಮ ನಿಜವಾದ ಜಾತಿ. ನಿಮ್ಮ ಪರಾಕ್ರಮವೇ ನಿಮ್ಮ ನಿಜವಾದ ಕುಲ. ಎಂದು ಕುಲದ ವಿಚಾರವನ್ನು ಸ್ಪಷ್ಟಪಡಿಸುತ್ತಾನೆ. ಸರ್ವಜ್ಞನು ಕೂಡಾ ಕುಲ ಕುಲವೆಂದು ಬಡಿದಾಡಬೇಡಿ ನಿಮ್ಮ ಕುಲದ ನೆಲೆಯನ್ನಾದರೂ ಬಲ್ಲಿರಾ 'ಆತ್ಮ ಯಾವ ಕುಲ ಜೀವ ಯಾವಕುಲ, ಆತನೊಲಿದ ಮೇಲೆ ಇನ್ಯತರ ಕುಲ ಪ್ರಶ್ನೆ ಮಾಡಿದ್ದಾರೆ. ಆದರೂ ಕೂಡ ಜಾತಿ ಪದ್ಧತಿಯಿಂದ ಇಂದು ಹಲವಾರು ದುರಂತಗಳು ನಡೆಯುತ್ತಲೇ ಇದೆ. ಪ್ರೀತಿಸಿದ ಪರಸ್ಪರ ಯುವ ಜೋಡಿಗಳು ಪ್ರೀತಿಸಿದ ಹಗಲುಗನಸಿನಲ್ಲಿ ತೇಲಾಡುತ್ತಾ ಅವರ ಪರಿಸ್ಥಿತಿ ಈ ಕೆಳಗಿನ ಕಿರುಗವನದಂತೆ ಬಹುಶಃ ಕೆಲವರ ಪ್ರೀತಿ ಜಾತಿ ಪದ್ಧತಿ ತೊಡಕಾಗಿದೆ ಎನ್ನಬಹುದು.

ಪ್ರೀತಿ ಮೊದ ಮೊದಲು ನವ್ಯ
ಭವ್ಯ ದಿವ್ಯ ಎಲ್ಲಾ ಎಲ್ಲಾ
ಆಮೇಲೆ ಭೂತ
ಹತ್ತುತ್ತದೆ

ಜನ್ಮನಾ ಜಾಯತೆ ಶೂದ್ರ ಸಂಸ್ಕಾರತ್ ದ್ವಿಜ ಉಚ್ಚತೆ ಎನ್ನುವ ಪ್ರಾಚೀನ ಸಂಸ್ಕೃತ ಶ್ಲೋಕ ಅರ್ಥ ಹೀಗಿದೆ ಜನ್ಮದಿಂದ ಎಲ್ಲರು ಶೂದ್ರರು ಸಂಸ್ಕಾರ ಪಡೆದವನು ಮಾತ್ರ ದ್ವಿಜ ಎಂದರೆ ಪ್ರಾಚೀನ ಕಾಲದಲ್ಲಿ ಬ್ರಾಹ್ಮಣ, ಕ್ಷತ್ರೀಯ, ವೈಶ್ಯ, ಶೂದ್ರ ಎಂಬ ನಾಲ್ಕು ವರ್ಣಗಳ ವಿಚಾರ ಬರುತ್ತದೆ. ಅದೇ ಹಳೆಯ ಕಾಲದ ಮೌಲ್ಯಗಳಿಗೆ ನಾವು ಬೆಲೆ ಕೊಟ್ಟರೆ ನಮ್ಮ ಮನುಷ್ಯತ್ವಕ್ಕೆ ಬೆಲೆ

ಎಲ್ಲಿದೆ? ಸಮಾಜವೆಂದ ಮೇಲೆ ಹುಟ್ಟು, ಸಾವು, ನೋವು, ನಲಿವು ಪ್ರೀತಿ, ಪ್ರೇಮ, ಸಹನೆ, ಕರುಣೆ ಎಲ್ಲವು ಎಲ್ಲರಿಗೂ ಬೇಕೆ ಬೇಕು. ಆದ್ದರಿಂದ ನಾವು ಪಂಪ, ಕನಕದಾಸ, ಸರ್ವಜ್ಞ ಮುಂತಾದ ಮಹಾನ್ ಕವಿಗಳ ದಾರ್ಶನಿಕರ ಮೌಲ್ಯಯುತವಾದ ವಿಚಾರಗಳನ್ನು ಓದಿ ಅಳವಡಿಸಿಕೊಳ್ಳುವುದು ಬಹು ಮಹತ್ವವಾಗಿದೆ.

**ನಾಡಪ್ರೇಮ ದೇಶಾಭಿಮಾನ**

ತೆಂಕಣಗಾಳಿ ಸೋಂಕಿದೊಡಮೊಳ್ನುಡಿ ಗೇಳ್ದೊಡಮಿಂಪನಾಳ್ದಗೇ
ಯಂಕಿವಿವೋಕ್ಕಡಂ ಬಿರಿದ ಮಲ್ಲಿಗೆ ಗಂಡೊಡಮಾದ ಕೆಂದಲಂ
ಪಂಗೆಡೆ ಗೊಂಡೊಡಂ ಮಧು ಮಹೋತ್ಸವ ಮಾದೊಡ ಮೇನನೆಂಬೆನಾ
ರಂಕುಸ ಮಿಟ್ಟೊಡಂ ನೆನೆವುದೆನ್ನ ಮನಂ ಬನವಾಸಿ ದೇಶಂ
(ಪಂಪಭಾರತ ಆಶ್ವಾಸ ೧೪ ಪದ್ಯ ೩೦)

ಕರ್ನಾಟಕವೆಂದರೆ ಬರಿ ಮಣ್ಣೆ ತಾಯಿ ಕಣಾ ದೇವಿ ಕಣಾ, ಸಿಡಿಲು ಕಣಾ ಎಂದು ಕವಿ ಕುವೆಂಪು ನಾಡಿನ ಮಹಿಮೆ ಕುರಿತು ಹಾಡಿದ್ದಾರೆ. ಅಲ್ಲದೆ ನೃಪತುಂಗನೆ ಚಕ್ರವರ್ತಿ ಪಂಪನೆ ಮುಖ್ಯಮಂತ್ರಿ, ರನ್ನ, ಜನ್ನ, ಕುಮಾರವ್ಯಾಸರೆ ಸಚಿವ ಮಂಡಲವೆಂದು ಪ್ರಾಚೀನ ಕಾಲದ ಗತವೈಭವನ್ನು ವರ್ಣನೆ ಮಾಡಿದ್ದರೆ.
ಆದರೆ ಪ್ರಸ್ತುತ ದಿನಗಳಲ್ಲಿ ದೇಶಕ್ಕಾಗಿ, ದೇಶಭಿಮಾನಕ್ಕಾಗಿ ಪ್ರಾಮಾಣಿಕವಾಗಿ ದುಡಿಯುವ ಪ್ರಜೆಗಳು ಜನಿಸುತ್ತಿಲ್ಲ ಒಂದು ವೇಳೆ ಜನಿಸಿದರು ಅವರಿಗೆ ದೇಶಕ್ಕಾಗಿ ದುಡಿಯುವ ದೇಶಕ್ಕಾಗಿ ಪ್ರಾಣ ಅರ್ಪಿಸುವ ಪ್ರಜೆಗಳಾಗಿ ಸಂಸ್ಕಾರ ಅವರಿಗೆ ಸಿಗುತ್ತಿಲ್ಲ, ಅಥವಾ ಅಂತಹ ವತಾವರಣ ಪ್ರಸ್ತುತ ದಿನಗಳಲ್ಲಿ ಇಲ್ಲ ಭಗತಸಿಂಗ, ರಾಜಗುರು, ಸುಖದೇವ, ಆಚಾರ ಚಂದ್ರಶೇಖರ್ ಮದಲಲಾಲ ದಿಂಗ್ರಾ, ಝಾನ್ಸಿರಾಣಿ ಲಕ್ಷ್ಮೀಭಾಯಿ, ಲಾಲ, ಬಾಲ, ಪಾಲ ಮೊದಲಾದ ವೀರರು ಈ ದೇಶಕ್ಕಾಗಿ ತಮ್ಮ ಪ್ರಾಣವನ್ನೆ ಅರ್ಪಿಸಿದರು.
ಅದಕ್ಕಾಗಿ ದೇಶ ನನಗಾಗಿ ಏನು ಮಾಡಿದೆ ಎನ್ನದೆ ನಾವು ದೇಶಕ್ಕಾಗಿ ಏನು ಮಾಡಬಹುದು ಎಂಬುದನ್ನು ವಿಚಾರಿಸಬೇಕಿದೆ. ಅಂತಹದರಲ್ಲಿ ಕನ್ನಡ ನಾಡು ಕಲೆಗಳ ಬೀಡು ಅಂತಹ ಸುಂದರವಾದ ನಾಡಿನ ನೆಲ, ಜಲ, ಭಾಷೆ ಮುಂತಾದ ವಿಷಯಗಳಲ್ಲಿ ನಮ್ಮ ಪ್ರಾಮಾಣಿಕವಾದ ಸೇವೆ ಬಹು ಅಗತ್ಯವಾಗಿದೆ. ಸಂಗೊಳ್ಳಿ ರಾಯಣ್ಣ, ಛತ್ರಪತಿ ಶಿವಾಜಿ, ಅಂಬೇಡ್ಕರ್, ಸರ್.ಎಂ. ವಿಶ್ವೇಶ್ವರಯ್ಯ, ಸಿ.ವಿ.ರಾಮನ್, ಸರ್ವಪಲ್ಲಿ ರಾಧಾಕೃಷ್ಣನ್ ಮುಂತಾದವರ ಚರಿತ್ರೆಯನ್ನು ಓದುವುದರ ಜೊತೆಗೆ ಪ್ರಾಚೀನ ಕಾವ್ಯಗಳನ್ನು ನಾವು ಅಧ್ಯಯನ ಮಾಡುವುದು ಒಳ್ಳೆಯದು.

**ಧರ್ಮ ಸಹಿಷ್ಣುತೆ**
ಕವಿರಾಜಮಾರ್ಗದಲ್ಲಿ 'ಕಸವರಮೆಂಬುದುನೆರೆ ಸೈರಿಸಲಾರ್ಪೊಡೆ ಪರವಿಚಾಮುಮಂಪರಧಮುಮಂ'
ಎಂಬ ಚಿನ್ನದಂತಹ ಮಾತೊಂದಿದೆ ಈ ಮಾತಿನ ನಿಜವಾದ ಅರ್ಥ ನಿಜವಾದ ಚಿನ್ನವೆಂದರೆ ಪರವಿಚಾರಗಳನ್ನು ಪರಧರ್ಮಗಳನ್ನು ಸಹಿಸುವುದಾಗಿದೆ. ಅನ್ಯರ ವಿಚಾರಗಳನ್ನು ಅನ್ಯರ ಧರ್ಮಗಳನ್ನು ಸಹಿಸುವುದೇ ನಿಜವಾದ ಸಂಪತ್ತು ನಮ್ಮ ದೇಶದಲ್ಲಿ ಹಿಂದು ಮುಸಲ್ಮಾನ, ಜೈನ, ಸಿಖ್ಖ, ಪಾರ್ಸಿ, ಮುಂತಾದ ಧರ್ಮಗಳಿಗೆ ಐತಿಹಾಸಿಕವಾಗಿ ರಾಜಮಹಾರಾಜನ ಕಾಲದಿಂದಲೂ ಸೂಕ್ತವಾದ ಸ್ಥಾನಮಾನಗಳನ್ನು ನೀಡಿದ್ದಾರೆ. ಈಗ ಅದನ್ನು ನಾವು ಅರ್ಥೈಸಿಕೊಂಡು ಬಾಳಬೇಕಾಗಿದೆ.

ಅದಕ್ಕೆ ಆತ್ಮಭಿಮಾನದ ಸಂದೇಶ ಕೊಟ್ಟ ರನ್ನ ಕವಿ
ರನ್ನನು ಬಹು ಆತ್ಮಪ್ರತ್ಯಯವುಳ್ಳ ಕವಿ ತನ್ನನ್ನು ತನ್ನ ಕವಿತಾ ಸಾಮರ್ಥ್ಯವನ್ನು ನಿರ್ಭಾಯವಾಗಿ ನಿಸ್ಸಂದಿಗ್ಧವಾಗಿ ಮುಕ್ತಕಂಠದಿಂದ ಹೊಗಳಿಕೊಂಡಿದ್ದಾನೆ. ತನ್ನ ಕಾವ್ಯ ವಿಮರ್ಶಕರನ್ನು ಕುರಿತು

ರತ್ನ ಪರೀಕ್ಷಕನಾಂ
ರತ್ನ ಪರೀಕ್ಷಕನೆಂದು ಫಣಿಪತಿಯ ಫಣಾ
ರತ್ನಮುಮಂ ರನ್ನನ ಕೃತಿ
ರತ್ನಮುಮಂ ಪರೀಕ್ಷಿಪಂಗೆಂಟೆರ್ದೆಯೆ?

ಎಂದು ಕೇಳುತ್ತಾನೆ ತಾನು ಹುಟ್ಟಿ 'ಬಹು ರತ್ನ ವಸುಂಧರಾ' ಎಂಬ ಹೇಳಿಕೆಯನ್ನು ಅಳಸಿಹಾಕಿ ಈ ಲೋಕದಲ್ಲಿ ಒಬ್ಬನೆ ರತ್ನ ಎನ್ನುವಂತೆ ಮಾಡಿಬಿಟ್ಟಂತೆ ಹಿಂದೆ ಯಾವ ಕವಿಗಳಿಂದಲೂ ಆಗದ ಮಹಾಕಾರ್ಯವನ್ನು ರನ್ನನು ಸಾರಸತ್ವ ಕವಿತೆಯಿಂದ ನಿರ್ವಹಿಸಿ 'ವಾಗ್ದೇವಿಯ ಭಂಡಾರದ ಮುದ್ರೆಯನೊಡೆದಂ' ರಸಭಾವಗಳನ್ನು ಅರಿತುಕೊಂಡು ಹೊಸದೇಶಿಯಲ್ಲಿ ಕಾವ್ಯ ರಚನೆ ಮಾಡಬಲ್ಲ ರನ್ನ ತನ್ನ ಸೃಷ್ಟಿಶಕ್ತಿಯಲ್ಲಿ ಇನ್ನೊಬ್ಬ ಚತುರ್ಮುಖನಂತೆ

**ಕನ್ನಡಿಗರ ಸಂಸ್ಕೃತಿ**
ಕನ್ನಡದ ಮೊದಲನೆಯ ಶಾಸನ ೭ನೇ ಶತಮಾನದ ಬಾದಾಮಿಯ ಕಪ್ಪೆಅರಭಟ್ಟನ ಶಾಸನ ಈ ಶಾಸನದಲ್ಲಿ ಕನ್ನಡಿಗರ ಸಂಸ್ಕೃತಿಯ ಲಕ್ಷಣದ ಪ್ರತಿಕವಾಗಿ ಕಪ್ಪೆ ಅರಭಟ ರಾಜ ನಮಗೆ ಗೋಚರಿಸುತ್ತಾನೆ ಆ ಶಾಸನದ ಸಾಲುಗಳು ಈ ಕೆಳಗಿನಂತಿದೆ.

ಸಾಧುಗೆ ಸಾಧು ಮಾಧುರ್ಯಂಗೆ ಮಾಧುರ್ಯಂ
ಬಾಧಿಪ್ಪ ಕಲಿಗೆ ಕಲಿಯುಗ ವಿಪರೀತನ್
ಮಾಧವನೀತನ ಪೆರನಲ್ಲ

**ಗೆಳೆತನದ ಆತ್ಮೀಯತೆ**
ರನ್ನನು ರಚಿಸಿರುವ ಗದಾಯುದ್ಧ ಎಂಬ ಕಾವ್ಯದಲ್ಲಿ ದುರ್ಯೋಧನ ಹಠವಾದಿಯಾಗಿ ಛಲದಂಕಮಲ್ಲನಾಗಿ ನಮಗೆ ಕಂಡುಬರುತ್ತಾನೆ. ಆದರೆ ನಿಜವಾಗಿಯು ಆತನಲ್ಲಿ ಮಿತ್ರಪ್ರೇಮವನ್ನು ಕಾಣಬಹುದು. ದುರ್ಯೋಧನ ಭೀಷ್ಮರ ಬಳಿಗೆ ಬಂದು 'ಸಮರದೊಳೆನಗಜ್ಜ ಪೇಳಮಾವುದು ಕಜ್ಜ? ಅಜ್ಜ ಯುದ್ಧದಲ್ಲಿ ನಾನೇನು ಮಾಡಬೇಕೆಂಬುದನ್ನು ಹೇಳಿ ಸಂಧಿಯ ಮಾತು ಬೇಡ ಎನ್ನುತ್ತಾ ಈ ಕೆಳಗಿನಂತೆ ನುಡಿಯುತ್ತಾನೆ.

ನೆಲಕಿರಿವಿನೆಂದು ಬಗೆವಿರೆ ಚಲಕಿರಿವೆಂ
ಪಾಂಡುಸುತರೊಳಿಂ ನೆಲನಿದು
ದಿನಪಸುತನಂ ಕೊಳಿಸಿದ ನೆಲದೊಡನೆ ಮತ್ತೆ
ಪದುಮಾಳ್ದಪೆನೆ

ಹೀಗೆ ದುರ್ಯೋಧನನಿಗೆ ಕರ್ಣ ದುಶ್ಯಾಸನೆಂದರೆ ಪಂಚಪ್ರಾನ ಅವರು ಇಲ್ಲದ ರಾಜ್ಯ ಏತಕ್ಕಾಗಿ ಬೇಕು ಎಂದು ಭೀಷ್ಮರಿಗೆ ಪ್ರಶ್ನೆ ಮಾಡುತ್ತಾನೆ. ಇಲ್ಲಿ ದಿನಪಸುತನೆಂದರೆ ಸೂರ್ಯನ ಮಗ ಕರ್ಣನೆಂದರ್ಥ.
ಕನ್ನಡ ಸಾಹಿತ್ಯ ಒಂದು ವಿಶಾಲವಾದ ಸಾಗರವಿದ್ದಮತೆ. ಆ ಸಾಗರದಲ್ಲಿ ಬಂಗಾರ ಬೆಳ್ಳಿ, ಮುತ್ತು, ರತ್ನದಂತಹ ಹಲವಾರು ಪ್ರಮುಖವಾದ ಮೌಲ್ಯಭರಿತವಾದ ನೀತಿಯುಕ್ತವಾದ ಸಂದೇಶಗಳಿವೆ. ಪ್ರಮುಖವಾಗಿ ನಾಡಭಕ್ತಿ, ದೇಶಪ್ರೇಮ, ಪ್ರಾಮಾಣಿಕತೆ, ವೀರತನ, ನಿರ್ಮಲವಾದ ಗೆಳೆತನ, ಕನ್ನಡನಾಡಿನ ಸಂಸ್ಕೃತಿ, ಕನ್ನಡಿಗರ ಗುಣಲಕ್ಷಣಗಳು, ಪ್ರಕೃತಿ ಪ್ರೇಮ ಹೀಗೆ ಧಾರ್ಮಿಕ ಹಾಗು ಸಾಮಾಜಿಕ ರಾಜಕೀಯ ಮುಂತಾದ ವಿಚಾರಗಳನ್ನು ನಾವು ಪ್ರಾಚೀನ ಪಠ್ಯಗಳ ಮರು ಓದುವುದರಿಂದ ನಮ್ಮ ನಾಡಿನ ಇತಿಹಾಸವನ್ನು ನಮ್ಮ ಮತ್ತೆ ಮತ್ತೆ ಮನನ

ಮಾಡಿಕೊಳ್ಳಬೇಕಾಗಿದೆ. ಅದರಲ್ಲಿರುವ ಒಳ್ಳೆಯ ಅಂಶಗಳನ್ನು ಮುಂದೆ ಬರುವ ಮಕ್ಕಳಿಗೆ ಪ್ರಜೆಗಳಿಗೆ ತಿಳಿಸಬೇಕೆಂದರೆ ನಾವು ಪ್ರಾಚೀನ ಪಠ್ಯಗಳ ಮರು ಓದು ಅವಶ್ಯವೆಂದು ಮನಗಾಣಬೇಕಾಗಿದೆ. ಕಾರಣ ಅಂಬೇಡ್ಕರ್ ಅವರು ಇತಿಹಾಸವನ್ನು ಒದಲಾರದವರು ಇತಿಹಾಸವನ್ನು ಸೃಷ್ಟಿಸಲಾರರು ಎಂದಿದ್ದಾರೆ.

**ಪರಾಮರ್ಶನ ಗ್ರಂಥಗಳು**


೧. ಕನ್ನಡ ಸಾಹಿತ್ಯ ಸಂಗಾತಿ – ಕೀರ್ತಿನಾಥ ಕುರ್ತುಕೋಟಿ – ಪ್ರಥಮ ಮು – ೧೯೯೫, ಪ್ರಕಟಣೆ ಕುರ್ತುಕೋಟಿ ಟ್ರಸ್ಟ ಧಾರವಾಡ.

೨. ನಮ್ಮ ಕರ್ನಾಟಕ – ಡಾ. ಟಿ.ವಿ. ವೆಂಕಟಾಚಲ ಶಾಸ್ತ್ರೀ – ಪ್ರಥಮ ಮುದ್ರಣ ೧೯೮೩ ಪ್ರಕಟನೆ – ಕ.ಸಾ.ಪ.

೩. ಕನ್ನಡ ಸಾಹಿತ್ಯ ಸಮೀಕ್ಷೆ – ಜಿ.ಎಸ. ಶಿವರುದ್ರಪ್ಪ – ತುಳುಕಿನ ವೆಂಕಣ್ಣಯ್ಯ ಸ್ಮಾರಕ ಗ್ರಂಥಮಾಲೆ ಮೈಸೂರು.

೪. ಕನ್ನದ ಸಾಹಿತ್ಯ ಚರಿತ್ರೆ – ತ.ಸು. ಶಾಮರಾಯ.